ದಿನಾಂಕ 05-06-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋದಿಸಲಾಯಿತು.

**ಪಾಟೀ ಸವಾಲು: ಪ್ರತಿವಾದಿಗಳ ಪರ ವಕೀಲರಿಂದ:**

ನನಗೆ ಓದಲು ಬರೆಯಲು ಬರುವುದಿಲ್ಲ. ಆದರೆ ಸಹಿ ಮಾಡಲು ಬರುತ್ತದೆ. ನಾನು ಹಳೇ ಬೇಲೂರಿನಲ್ಲಿ ವಾಸವಿರುತ್ತೇನೆ. ದಾವಾ ಆಸ್ತಿಯು ಹೊಸ ಬೇಲೂರಿನಲ್ಲಿ ಇರುತ್ತದೆ ಎಂದರೆ ಸರಿ. ಹಳೇ ಬೇಲೂರಿನಿಂದ ದಾವಾ ಆಸ್ತಿಗೆ ಅಂದಾಜು 1 ಕಿ.ಮೀ. ಅಂತರ ಇರುತ್ತದೆ. ನಾನು ಮದ್ಯ ವ್ಯಾಪಾರ ಮಾಡುವುದಿಲ್ಲ ಆದರೆ ಕಿರಾಣಿ ಅಂಗಡಿ ಇಟ್ಟುಕೊಂಡಿರುತ್ತೇನೆ. ಸದರಿ ಅಂಗಡಿಯು ಹಳೇ ಬೇಲೂರಿನ ಕರಿಯಮ್ಮನ ದೇವಸ್ಥಾನದ ಬಳಿ ಇರುತ್ತದೆ.

2. ದಾವಾ ಆಸ್ತಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ನಾನು ನೋಡಿರುತ್ತೇನೆ. ನನಗೆ ಸರ್ವೆ ನಂ.52 ರಲ್ಲಿ ಪ್ಲಾಟ್ ಮಂಜೂರಾಗಿರುತ್ತದೆ. ಸದರಿ ಸರ್ವೆ ನಂಬರ್ ನಲ್ಲಿ ಎಷ್ಟು ಪ್ಲಾಟ್ ಗಳಾಗಿರುತ್ತವೆ ಎಂದು ನನಗೆ ಗೊತ್ತಿಲ್ಲ. ಸದರಿ ಸರ್ವೆ ನಂಬರ್ ನಲ್ಲಿ ಒಟ್ಟು 206 ಪ್ಲಾಟ್ ಗಳಾಗಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸರ್ವೆ ನಂಬರ್ ನ ಪ್ಲಾಟ್ ಗಳನ್ನು 1987-88 ಅಥವಾ 1992 ರಲ್ಲಿ ಮಂಜೂರು ಮಾಡಲಾಗಿದೆಯೇ ಎಂಬ ಪ್ರಶ್ನೆಗೆ ಸಾಕ್ಷಿಯು ಯಾವುದೇ ಸಮರ್ಪಕ ಉತ್ತರವನ್ನು ನೀಡಿರುವುದಿಲ್ಲ.

3. ಪ್ಲಾಟ್ ನಂ.133 ಮತ್ತು 44 ಬೇರೆ ಬೇರೆ ಪ್ಲಾಟ್ ಗಳು ಎಂದರೆ ಸಾಕ್ಷಿಯು ಪ್ಲಾಟ್ ನಂ.44 ರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಬೇಲೂರಿನಲ್ಲೇ ಹುಟ್ಟಿ ಬೆಳೆದಿರುತ್ತೇನೆ ಎಂದರೆ ಸರಿ. ಸರ್ವೆ ನಂ.52 ರ ಆಸ್ತಿಯನ್ನು ನಾನು ನೋಡಿರುತ್ತೇನೆ ಎಂದರೆ ಸರಿ. ಸದರಿ ಸರ್ವೆ ನಂಬರ್ ನಲ್ಲಿ ಪಂಚಾಯತಿಯಲ್ಲಿ ಪ್ಲಾಟ್ ಗಳನ್ನು ಮಾಡಿ ಹಂಚಿರುವ ಬಗ್ಗೆ ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ಪ್ರತಿವಾದಿಗಳು ಸಲ್ಲಿಸಿರುವ ಪ್ರತಿವಾದ ಪತ್ರದ ವಿಷಯಗಳ ಬಗ್ಗೆ ನನಗೆ ಮಾಹಿತಿ ಇಲ್ಲ.

4. ಪ್ರತಿವಾದಿಗಳು ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಚಲಾಯಿಸಿರುವುದಿಲ್ಲ ಆದರೆ ಕೇವಲ ಪ್ಲಾಟ್ ನಂ.44 ರ ಮೇಲೆ ಕ್ಲೇಮ್ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಪ್ಲಾಟ್ ನಂಬರ್ 44 ರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿ ಮತ್ತು ಪ್ಲಾಟ್ ನಂ.44 ರ ಚಕ್ಕುಬಂದಿಗಳು ಬೇರೆ ಬೇರೆ ಎಂದರೆ ಸಾಕ್ಷಿಯು ಪ್ಲಾಟ್ ನಂಬರ್ 44 ರ ಚಕ್ಕುಬಂದಿ

ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

5. ಈ ದಾವೆಯನ್ನು ಹೂಡುವ ಪೂರ್ವದಲ್ಲಿ ನಿಪಿ 4 ರಂತೆ ಓ ಎಸ್ ನಂ.206/2016 ದಾವೆಯನ್ನು ಹೂಡಿದ್ದೆನು ಎಂದರೆ ಸರಿ. ಸದರಿ ದಾವೆಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ ಎಂದರೆ ಸರಿ. ಸದರಿ ದಾವೆಯಲ್ಲಿ ಪ್ರತಿವಾದಿಗಳು ನನ್ನ ಕಬ್ಜಾ ಪಡೆದುಕೊಂಡಿರುತ್ತಾರೆ ಎಂದು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ನಾಲ್ಕು ದಿಕ್ಕಿನಲ್ಲಿ ರಸ್ತೆ ಇರುತ್ತದೆ. ವಾದ ಪತ್ರದಲ್ಲಿ ತೋರಿಸಿರುವ ಚಕ್ಕುಬಂದಿಯನ್ನು ನಾನೇ ಹೇಳಿ ಬರೆಸಿರುತ್ತೇನೆ. ಸಾಕ್ಷಿಗೆ ಈ ಎರಡೂ ಚಕ್ಕುಬಂದಿಗಳಲ್ಲಿ ಯಾವ ಚಕ್ಕುಬಂದಿ ಸರಿ ಇರುವುದಾಗಿ ಪ್ರಶ್ನೆ ಕೇಳಿದ್ದು ಸಾಕ್ಷಿಯು ನಾಲ್ಕು ದಿಕ್ಕಿನಲ್ಲಿ ರಸ್ತೆ ಇರುವ ಚಕ್ಕುಬಂದಿ ಸರಿಯಿರುವುದಾಗಿ ನುಡಿಯುತ್ತಾರೆ.

6. ಸರ್ವೆ ನಂ.52 ರ ಪ್ಲಾಟ್ ನಂ.44 1 ನೇ ಪ್ರತಿವಾದಿಯ ತಂದೆಯ ಹೆಸರಿಗೆ 1982 ರಲ್ಲಿ ಮಂಜೂರಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅದೇ ಸಮಯದಲ್ಲಿ ಉಳಿದ ಹಲವು ಪ್ಲಾಟ್ ಗಳನ್ನು ಬೇರೆಯವರಿಗೆ ಮಂಜೂರು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯ ತಂದೆ ಸದರಿ ಪ್ಲಾಟ್ ಮಂಜೂರಾದ ನಂತರ ಗುಡಿಸಲು ಕಟ್ಟಿಕೊಂಡಿದ್ದನು ಎಂದರೆ ನನಗೆ ಗೊತ್ತಿಲ್ಲ. 1992 ರಲ್ಲಿ ಮಳೆಯ ಕಾರಣ ಸದರಿ ಗುಡಿಸಲು ಬಿದ್ದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯ ತಂದೆ 11-11-2005 ರಂದು ಮರಣ ಹೊಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳು ತಿಮ್ಮಣ್ಣನ ಹೆಂಡತಿ, ಮಕ್ಕಳು ಎಂದು ನನಗೆ ಗೊತ್ತಿಲ್ಲ.

7. ನಿಪಿ 3 ರಲ್ಲಿ ತೋರಿಸಿರುವ ಚಕ್ಕುಬಂದಿಯಲ್ಲಿ ನಾಲ್ಕು ಕಡೆ ರಸ್ತೆ ಇರುವುದಾಗಿ ನಮೂದಿಸಿರುವುದಿಲ್ಲ ಎಂದರೆ ಸಾಕ್ಷಿಯು ಸದರಿ ದಾಖಲೆಯಲ್ಲಿ ತೋರಿಸಿರುವ ಚಕ್ಕುಬಂದಿ ತಪ್ಪಿನಿಂದ ಕೂಡಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಚಕ್ಕುಬಂದಿ ತಿದ್ದುಪಡಿಗೆ ನಾನು ಯಾವುದೇ ಅರ್ಜಿ ನೀಡಿರುವುದಿಲ್ಲ. ತಿಮ್ಮಣ್ಣ ಮರಣ ಹೊಂದಿದ ನಂತರ ಪ್ಲಾಟ್ ನಂ.44 2 ನೇ ಪ್ರತಿವಾದಿಯ ಹೆಸರಿಗೆ ವರ್ಗಾವಣೆಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಈಗ ಸದರಿ ಪ್ಲಾಟ್ ನ್ನು 3 ನೇ ಪ್ರತಿವಾದಿಯ ಹೆಸರಿಗೆ ವರ್ಗಾವಣೆ ಮಾಡಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಂತರ 3 ನೇ ಪ್ರತಿವಾದಿಯು ಸದರಿ ಪ್ಲಾಟ್ ನಲ್ಲಿ ಸಂಬಂಧಿಸಿದ ಪಂಚಾಯತಿ ಪರವಾನಿಗೆ ಪಡೆದು ಬಸವ ಯೋಜನೆ ಅಡಿಯಲ್ಲಿ 2016 ನೇ ಸಾಲಿನಲ್ಲಿ ಮನೆ ಕಟ್ಟಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ನಾನು ಮನೆ ಕಟ್ಟುವಾಗ ತಕರಾರು ಮಾಡಿದ್ದು ಅದರೂ ಸಹ ಮನೆ ಕಟ್ಟಿಕೊಂಡಿರುವುದಾಗಿ ನುಡಿಯುತ್ತಾರೆ. ಸದರಿ ಮನೆಯಲ್ಲಿ 3 ನೇ

ಪ್ರತಿವಾದಿ ವಾಸವಿರುತ್ತಾರೆ ಎಂದರೆ ಸರಿ.

**ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.